# ಶ್ರೀ ಶಾರದಾ

ಮಾಸ ಪತ್ರಿಕೆ - 21 ಮೇ 2012

ಬೆಲೆ ರೂ.2.50
WPP No. SK/MNG/WPP/69
Posted on 21st May 2012 at Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-12 ಸಂಚಿಕೆ-5 Registered Under No.J/UDP/1260/2012-2014 Dated from 01-01-2012 to 31-12-2014.




## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ - 2012

# ಸಮಾವೇಶ ಅಗತ್ಯ : ಡಾ। ಹೆಗ್ಗಡೆ

**ಶಿಕ್ಷಣದ ಜೊತೆಗೆ ಪರಂಪರಾಗತವಾದ ಸಂಸ್ಕಾರಗಳನ್ನು ಕೊಡಿಸಲು ಆದ್ಯತೆ ನೀಡಬೇಕು. ಸ್ಥಾನಿಕ ಬ್ರಾಹ್ಮಣರು ಎದುರಿಸುತ್ತಿರುವ ಸಮಸ್ಯೆಗಳನ್ನು ಎಲ್ಲಾ ಸಮಾಜದವರೂ ಎದುರಿಸುತ್ತಿದ್ದಾರೆ. ಈ ಸಮಾವೇಶ ದೂರದೃಷ್ಟಿ ಹೊಂದಿದ ಕಾರ್ಯಕ್ರಮ. ಯಾವುದೇ ಲಾಭ, ಸ್ಥಾನಮಾನ ಪಡೆಯಲು ಹವಣಿಸುವ ಉದ್ದೇಶ ಹೊಂದಿಲ್ಲದೆ ಇರುವುದು ಶ್ಲಾಘನೀಯ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ.ವೀರೇಂದ್ರ ಹೆಗ್ಗಡೆಯವರು ಕರೆ ನೀಡಿದ್ದಾರೆ.**

ಅವರು ಕುಂಜಿಬೆಟ್ಟಿನ ಶಾರದಾ ಮಂಟಪದಲ್ಲಿ ತಾ.12-05-2012 ಶನಿವಾರ ಆರಂಭಗೊಂಡ ಎರಡು ದಿನಗಳ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಜಾತೀಯ ಸಮ್ಮೇಳನಗಳು ನಡೆದಾಗ ಇದೇಕೆ? ಪ್ರತ್ಯೇಕತೆ ಬೇಕೆ ಇತ್ಯಾದಿ ಪ್ರಶ್ನೆಗಳು ಬರುತ್ತವೆ. ಆದರೆ ಪಕ್ಷಿಗಳು, ಪ್ರಾಣಿಗಳೆಲ್ಲ ಒಂದೇ ಎಂಬ ಭಾವದಲ್ಲಿ ಹೇಳಿದರೂ ಪ್ರತಿಯೊಂದರಲ್ಲಿಯೂ ವೈವಿಧ್ಯ ಗಳಿರುತ್ತವೆ. ಅವುಗಳ ಆಹಾರ, ವ್ಯವಹಾರ ಭಿನ್ನವಾಗಿರುತ್ತವೆ. ಒಂದು ಸಸ್ಯಾಹಾರಿ ಪ್ರಾಣಿ ಮಾಂಸಾಹಾರವನ್ನು ಗೊತ್ತಿಲ್ಲದೆ ಸ್ವೀಕರಿಸಿದರೂ ಸಾವನ್ನಪ್ಪುತ್ತದೆ. ಮನುಷ್ಯನಿಗೆ ಬುದ್ಧಿವಂತಿಕೆಯೊಂದಿಗೆ ಅರಿತುಕೊಳ್ಳುವ ಶಕ್ತಿಯೂ ಇದೆ. ನಾವು ನಮ್ಮತನ, ವ್ಯಕ್ತಿತ್ವ ಉಳಿಸಿಕೊಳ್ಳಬೇಕು. ಹಳೆಯ ಸಮಸ್ಯೆಗಳನ್ನೇ ಹೇಳುತ್ತಾ ಇರುವುದರಿಂದ ನಮ್ಮ ಹಿನ್ನಡೆಗೆ ನಾವೇ ಕಾರಣರಾಗುತ್ತೇವೆ ಎಂದು ಡಾ। ಹೆಗ್ಗಡೆಯವರು ಹೇಳಿದರು.

ನಾವೆಲ್ಲ ಒಂದು ಯಂತ್ರದ ಭಾಗವಾಗಿದ್ದೇವೆ ಎಂಬ ಭಾವ ಇರಬೇಕು. ಕೀಳರಿಮೆ ಸಲ್ಲದು. ವ್ಯಕ್ತಿತ್ವವನ್ನು ಉಳಿಸಿಕೊಂಡು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬಹುದು ಎಂದ ಡಾ।ಹೆಗ್ಗಡೆಯವರು ನಂಬಿಕೆ, ವಿಶ್ವಾಸ, ಧರ್ಮ ಭೀರುತ್ವ, ನಿಷ್ಠೆ ಇತ್ಯಾದಿಗಳಲ್ಲಿ ಸ್ಥಾನಿಕರು ಅಗ್ರಮಾನ್ಯರಾಗಿ ನಿಲ್ಲುತ್ತಾರೆ ಎಂದರು.

### ಶೀಘ್ರ ವಿವಾಹ-ಶೀಘ್ರೋಪನಯನ...!

ಹೆಣ್ಣು ಸಿಗುವುದಿಲ್ಲ ಎಂಬ ಸಮಸ್ಯೆ ಎಲ್ಲ ಜಾತಿಗಳಲ್ಲಿಯೂ ಇದೆ. ಮದುವೆ ಮಾಡುವುದಾದರೆ ಆದಷ್ಟು ಬೇಗ ಮಾಡಬೇಕು. ಇಲ್ಲವಾದರೆ ಅಂತರ್ಜಾತಿ ವಿವಾಹಗಳು ಜಾಸ್ತಿಯಾಗುತ್ತವೆ. ವಿಳಂಬವಾದಾಗ ಕೈಚೆಲ್ಲಿ ಕೂಡಬೇಕಾದ ಸ್ಥಿತಿ ಇದೆ.

ನಾಲ್ಕಾರು ವರ್ಷಗಳ ಬಳಿಕ ಮಕ್ಕಳ ಪ್ರೇಮ ಸಂಬಂಧದ ಬಗ್ಗೆ ಹಿರಿಯರು ನಮ್ಮಲ್ಲಿ ಬಂದು ಕೇಳುತ್ತಾರೆ. ನಾವು ಏನು ಉತ್ತರಿಸುವುದು? ಲಾಲಸೆ, ಸ್ವಪ್ರತಿಷ್ಠೆಗಾಗಿ ವ್ಯಕ್ತಿತ್ವ ಹಾಳು ಮಾಡಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು ಎಂದು ಡಾ।ಹೆಗ್ಗಡೆ ಕಿವಿಮಾತು ನುಡಿದರು. ಮಕ್ಕಳು, ಮೊಮ್ಮಕ್ಕಳಿಗೆ ವೈದಿಕತನವನ್ನು ತಿಳಿಸಿಕೊಡಬೇಕು. ಈಗೆಲ್ಲ 22-23 ವರ್ಷಕ್ಕೆ ಉಪನಯನ ಮಾಡುತ್ತಾರೆ. ಮದುವೆ ಮತ್ತು ಉಪನಯನವನ್ನು ಒಟ್ಟಿಗೆ ಮಾಡಬಹುದಲ್ಲ? ಎಂದು ನಾವು ಕೇಳಿದ್ದಿದೆ. 'ಸಂಪ್ರದಾಯ' ಎಂದು ಉತ್ತರಿಸುತ್ತಾರೆ. ಸಂಸ್ಕಾರ ಕೊಡುವುದಕ್ಕಾಗಿ ಉಪನಯನದಂತಹ ಸಂಪ್ರದಾಯ ಇರಬೇಕು ಎಂದು ಡಾ। ಹೆಗ್ಗಡೆ ಅಭಿಪ್ರಾಯಪಟ್ಟರು.



### ಪುಸ್ತಕ ಬಿಡುಗಡೆ

ಅಡೂರು ಶ್ರೀಧರ ರಾವ್ ವಿರಚಿತ **'ಯಕ್ಷಗಾನ ವರ್ಣವೈವಿಧ್ಯ'**, ಸಾವಿತ್ರಿ ಮನೋಹರರ **'ಪ್ರಳಯ ಪ್ರಹಸನ'**, ಕೃಷ್ಣಕುಮಾರರಾವ್ ಮಟ್ಟು ಅವರ **'ಚಿಂತನ ಮಾಲೆ ಮೂರನೆಯ ಆವೃತ್ತಿ'**, ಎಂ. ಆರ್. ಸತ್ಯನಾರಾಯಣರ **'ಶ್ರೀಮಾತೆ ಎಷ್ಟು ಹತ್ತಿರ ಆದರೆ ಎಷ್ಟು ದೂರ ?'** ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ **'ವಿಶೇಷ ಕೈಪಿಡಿ'** ಯನ್ನು ಡಾ।ಹೆಗ್ಗಡೆ ಬಿಡುಗಡೆಗೊಳಿಸಿದರು. ಕಲಾವಿಮರ್ಶಕ, ಉದಯವಾಣಿಯ ನಿವೃತ್ತ ಮ್ಯಾಗಜಿನ್ ಸಂಪಾದಕ ಎ.ಈಶ್ವರಯ್ಯ ಅವರನ್ನು ಡಾ। ಹೆಗ್ಗಡೆ ಸಮ್ಮಾನಿಸಿದರು.

ಈಶ್ವರಯ್ಯನವರು ಶುಭಾಶಂಸನೆಗೈಯುತ್ತಾ ನಾಡಿನ ಉದ್ದಗಲದಲ್ಲಿ ಹರಡಿಕೊಂಡಿರುವ ಸಮಾಜ ಬಾಂಧವರನ್ನು ಒಗ್ಗೂಡಿಸುವ ಕಾರ್ಯಕ್ರಮ ಈ ಸಮಾವೇಶದಲ್ಲಿ ಜರಗಿದೆ. ಇದಕ್ಕಾಗಿ ವಾಸುದೇವ್‌ರವರ ತಂಡಕ್ಕೆ ನಾವು ಚಿರಋಣಿಯಾಗಿರಬೇಕು. ಏಳು ಬೀಳುಗಳು ಇದ್ದೆ ಇರುತ್ತದೆ. ಸಮಸ್ಯೆ ಇಲ್ಲದ ಸಮುದಾಯವೇ ಇಲ್ಲ. ಭೂತಕಾಲವನ್ನು ಮರೆಯಬೇಕು. ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬೇಕೆಂಬ ಉತ್ತಮ ಸಂದೇಶವನ್ನು ಸಮಾಜ ಬಾಂಧವರಿಗೆ ಅವರು ನೀಡಿದರು.

(ಹನ್ನೆರಡನೇ ಪುಟಕ್ಕೆ)

**ಚಿತ್ರಗಳು : ಶ್ರೀ ದೇವಾನಂದ ಭಟ್ ಮತ್ತು ಶ್ರೀ ವಸಂತ್‌ರಾವ್ ಕೇದಿಗೆ**





ಮಂಗಳೂರಿನ ಶ್ರೀಮತಿ ಶಾರದಾ ಮತ್ತು ಬಳಗದಿಂದ ವೀಣಾವಾದನ

ಶ್ರೀ ಚಂದ್ರಕಾಂತ ರಾವ್ ಮತ್ತು ಬಳಗದವರಿಂದ ಯಕ್ಷಸಂಗೀತ

ಕಾರ್ಕಳ ಶಂಕರ ಪ್ರತಿಷ್ಠಾನದವರಿಂದ ಕಾರ್ಯಕ್ರಮ ವೈವಿಧ್ಯ





ಕಾರ್ಕಳ ಶಂಕರ ಪ್ರತಿಷ್ಠಾನದವರಿಂದ ಕಾರ್ಯಕ್ರಮ ವೈವಿಧ್ಯ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ ಇವರಿಂದ ಕಾರ್ಯಕ್ರಮ ವೈವಿಧ್ಯ





ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಂಘ, ಬೆಳ್ತಂಗಡಿ ಇವರಿಂದ ಕಾರ್ಯಕ್ರಮ ವೈವಿಧ್ಯ

ಪೂಜ್ಯ ಹೆಗ್ಗಡೆಯವರನ್ನು ಮೆರವಣಿಗೆಯಲ್ಲಿ ಕರೆತರುವುದು.





ಶ್ರೀ ಎ. ಈಶ್ವರಯ್ಯ ಇವರಿಂದ ದೀಪ ಪ್ರಜ್ವಲನೆ.

ಪೂಜ್ಯ ಹೆಗ್ಗಡೆಯವರು ಶ್ರೀ ಎ. ಈಶ್ವರಯ್ಯರನ್ನು ಸನ್ಮಾನಿಸುವುದು.

ಪೂಜ್ಯ ಹೆಗ್ಗಡೆಯವರಿಂದ ವಿವಿಧ ಪುಸ್ತಕಗಳ ಬಿಡುಗಡೆ





ವಿದ್ವಾನ್ ಸಾಯಿನಾರಾಯಣ ಮತ್ತು ತಂಡದವರಿಂದ ನಾದೋಪಾಸನ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸೇವಾ ಸಂಘ (ರಿ.) ಸುಳ್ಯ ಇವರಿಂದ ಕಾರ್ಯಕ್ರಮ ವೈವಿಧ್ಯ





ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟದವರಿಂದ ಗೊಂಬೆಯಾಟ

ಶಿವ ಬ್ರಾಹ್ಮಣ ಸ್ಥಾನಿಕ ಸಂಘ ಬಪ್ಪನಾಡು ಇವರಿಂದ ಕಾರ್ಯಕ್ರಮ ವೈವಿಧ್ಯ





ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು, ಮೂಡಬಿದ್ರಿ ಇವರಿಂದ ಕಾರ್ಯಕ್ರಮ ವೈವಿಧ್ಯ



ಬಾಲಪ್ರತಿಭೆ



ಯಕ್ಷಗಾನ ಶಿವಪಂಚಾಕ್ಷರಿ ಮಹಿಮೆಯ ಒಂದು ನೋಟ



ಯಕ್ಷಗಾನ ಶಿವಪಂಚಾಕ್ಷರಿ ಮಹಿಮೆಯ ಒಂದು ನೋಟ



ಶಿವಬ್ರಾಹ್ಮಣ ಸಂಘ, ಪುತ್ತೂರು ಇವರಿಂದ ಸಂಗೀತ ವೈಭವ



ಸ್ಥಾನಿಕ ಯುವ ಬ್ರಾಹ್ಮಣ ಸಂಘ, ಕಡಬ ಇವರಿಂದ ಕಾರ್ಯಕ್ರಮ ವೈಭವ





ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇವರಿಂದ ಕಾರ್ಯಕ್ರಮ ವೈಭವ




ಕುಂದಾಪುರ ತಾಲೂಕಾ ಸ್ಥಾನಿಕ ಬ್ರಾಹ್ಮಣ ಸಂಘದವರಿಂದ ತಾಳಮದ್ದಲೆ







ಮೈಸೂರು ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ, ಮೈಸೂರು ಇವರಿಂದ ಕಾರ್ಯಕ್ರಮ ವೈಭವ




ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಇವರಿಂದ ಕಾರ್ಯಕ್ರಮ ವೈಭವ




ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಇವರಿಂದ ಕಾರ್ಯಕ್ರಮ ವೈಭವ



ಉಡುಪಿ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಿಂದ ಕಾರ್ಯಕ್ರಮ ವೈಭವ



ಸನ್ಮಾನದ ಒಂದು ಕ್ಷಣ

# ಸ್ಥಾನಿಕ ಬ್ರಾಹ್ಮಣರ ಕೊಡುಗೆ ಅಪಾರ : ಜಯರಾಮ ಭಟ್




**ಸ್ಥಾನಿಕ ಬ್ರಾಹ್ಮಣರು ಸಮಾಜ ಮತ್ತು ದೇಶದ ಅಭಿವೃದ್ಧಿಗೆ ವಿಶೇಷ ಕೊಡುಗೆ ಸಲ್ಲಿಸುತ್ತಿದ್ದಾರೆ. ಸಮಾವೇಶ ಅಥವಾ ವಿಚಾರಗೋಷ್ಠಿಗಳು ಯಾಕೆ ಬೇಕೆಂದರೆ ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದು ಇತರರಿಗೆ ತಿಳಿಯುವಂತಾಗಬೇಕು. ವಾಸುದೇವ್‌ರವರು ಮಂಗಳೂರಿನಲ್ಲಿ ಕ್ರಾಂತಿ ಯನ್ನು ಮಾಡಿದವರು. ಇವರು ಇತರರಿಗೆ ರೋಲ್ ಮಾಡೆಲ್ ಆಗಿದ್ದಾರೆ. ಕರ್ಣಾಟಕ ಬ್ಯಾಂಕ್‌ನಲ್ಲಿ ಬ್ರಾಹ್ಮಣ ಸಮಾಜದ ಕೊಡುಗೆ ಹೆಚ್ಚಿನದ್ದು. ಇವರಲ್ಲಿ ಸ್ಥಾನಿಕರ ಪಾಲು ಕೂಡ ಬಹಳಷ್ಟು ಇದೆ ಎಂದು ಕರ್ಣಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಜಯರಾಮ ಭಟ್ ಬಣ್ಣಿಸಿದರು.**

ಅವರು ಮೇ 13ರಂದು ಕುಂಜಿಬೆಟ್ಟು ಶಾರದಾ ಮಂಟಪದಲ್ಲಿ ನಡೆದ ಎರಡು ದಿನಗಳ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಪ್ರಧಾನ ಅಭ್ಯಾಗತರಾಗಿ ಪಾಲ್ಗೊಂಡು ಮೇಲಿನಂತೆ ಮಾತನಾಡಿದರು.

ಮುಂಬೈ ಭಾರತೀಯ ಸ್ಟೇಟ್ ಬ್ಯಾಂಕ್ ಉಪವ್ಯವಸ್ಥಾಪಕ ನಿರ್ದೇಶಕ ಪಂಜ ಪ್ರದೀಪ್‌ಕುಮಾರರು ಮಾತನಾಡುತ್ತಾ ಈಗಿನ ಯುವಕರು ನಮ್ಮ ಸಮಾಜದ ಒಳ ಹೊರಗನ್ನು ಅರಿತು ವ್ಯವಹರಿಸಿಬೇಕು ಎಂದು ತಿಳಿಸಿದರು.

ಮಂಗಳೂರು ಎಂಸಿಎಫ್ ವ್ಯವಸ್ಥಾಪಕ ನಿರ್ದೇಶಕ ಕೆ.ಪ್ರಭಾಕರ ರಾವ್ ಸಮಾವೇಶ ಮಾಡುವ ಉದ್ದೇಶ ನಮ್ಮನ್ನು ನಾವೇ ಗುರುತಿಸಿಕೊಳ್ಳಲು ಕಾರಣವಾಗುತ್ತದೆ. ನಮ್ಮ ಸಮುದಾಯದ ತೊಂದರೆಗಳು ಎಲ್ಲಾ ಸಮಾಜಕ್ಕೂ ಇದೆ. ಯುವಕರು ಮುಂದೆ ಬರುತ್ತಿಲ್ಲ ಎಂಬ ವಿಚಾರ ಸಮಂಜಸವಲ್ಲ. ಯುವ ಪೀಳಿಗೆಯ ಮೇಲೆ ನಮಗೆ ಅಪಾರ ಅಭಿಮಾನವಿರಬೇಕು. ನಮ್ಮ ಮಕ್ಕಳು ಸಂಸ್ಕಾರವಂತರಾಗಿ ಬೆಳೆಯುತ್ತಿದ್ದಾರೆ. ನಮ್ಮ ಸಂಘಟನೆಗಳು ಬೆಳೆಯುತ್ತಿವೆ. ನಮ್ಮಲ್ಲಿ ಇಚ್ಛಾಶಕ್ತಿಯ ಕೊರತೆಯಿದೆ. ಮುಂದಿನ ಸಮಾವೇಶ ಅದ್ದೂರಿಯಾಗಿ ನಡೆಯಬೇಕು. ನಮ್ಮ ಸಮಾಜದಲ್ಲಿ ನುರಿತ ವೈದ್ಯರು, ಅಧ್ಯಾಪಕರು, ಉದ್ಯಮಿಗಳೂ ಇದ್ದಾರೆ. ಇವರೆಲ್ಲ ಈ ಕಾರ್ಯಕ್ಕೆ ಶ್ರಮ ಪಡುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಶಾಲು, ಹಾರ, ಸ್ಮರಣಿಕೆ, ಫಲವಸ್ತುಗಳನ್ನು ನೀಡಿ ಸನ್ಮಾನಿಸಲಾಯಿತು.

ಸಮಾವೇಶದ ಅಧ್ಯಕ್ಷತೆಯನ್ನು ಸಮಿತಿ ಗೌರವಾಧ್ಯಕ್ಷ ಎಂ.ಆರ್.ವಾಸುದೇವ್ ವಹಿಸಿದ್ದರು. ಗೌರವ ಸಂಚಾಲಕರಾದ ಶ್ರೀ ಸಿ.ಎಸ್.ರಾವ್, ಅಧ್ಯಕ್ಷರಾದ ಶ್ರೀ ಕೆ. ಉಮೇಶ್ ಶ್ಯಾನುಭಾಗ್ ಕಿರಿಮಂಜೇಶ್ವರ, ಪ್ರಧಾನ ಕಾರ್ಯದರ್ಶಿ ಪ್ರಫುಲ್ಲಚಂದ್ರ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವೈ. ಎಸ್. ಸುದರ್ಶನ ರಾವ್ ಕಾರ್ಯಕ್ರಮ ನಿರ್ವಹಿಸಿದರು.

## ಸಮಾವೇಶ ಅಗತ್ಯ : ಡಾ। ಹೆಗ್ಗಡೆ

(...1ನೇ ಪುಟದಿಂದ)

ಉದಯವಾಣಿ ಮಂಗಳೂರು ಸುದ್ದಿ ವಿಭಾಗ ಮುಖ್ಯಸ್ಥ ಶ್ರೀ ಮನೋಹರ ಪ್ರಸಾದ್‌ರವರು ಮಾತನಾಡುತ್ತಾ ಇವತ್ತಿನ ಚಿಂತನೆಗಳಿಂದ ನಾಳೆಯನ್ನು ಕಟ್ಟಬಹುದು. ಉತ್ತಮ ಜೀವನವನ್ನು ನಡೆಸುತ್ತಿರುವ ಪ್ರತಿಯೊಬ್ಬ ಸಮಾಜ ಬಾಂಧವರಿಂದ ರೂಪಾಯಿ ಹತ್ತು ಸಾವಿರವನ್ನು ಸಂಗ್ರಹಿಸಿ ಅದನ್ನು ಬಡ ಮಕ್ಕಳ ಶಿಕ್ಷಣಕ್ಕೆ ಬಳಸಿಕೊಳ್ಳಬೇಕು. ಈ ಕಾರ್ಯ ನಮ್ಮ ಸಮಾಜದಲ್ಲಿ ಆದಷ್ಟು ಬೇಗನೆ ಆಗುವಂತಾಗ ಬೇಕು. ಮಕ್ಕಳಿಗೆ ಸಂಸ್ಕಾರವನ್ನು ನೀಡಬೇಕು, ಇದರಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ತಿಳಿಸಿದರು. ಮನೋಹರ್ ಪ್ರಸಾದ್‌ರವರು ಹಲವು ಉದಾಹರಣೆಗಳನ್ನು ನೀಡುವುದರ ಮೂಲಕ ಮಾಡಿದ ಭಾಷಣ ಜ್ಞಾನವನ್ನು ಒದಗಿಸುವುದರೊಂದಿಗೆ ಜನರ ಮನಸ್ಸನ್ನು ಸಂತೋಷಗೊಳಿಸಿತು.

ಶ್ರೀ ರಾಮಮೋಹನ್ ರಾವ್ ಬೆಳ್ಳೆಯವರು ದಿಕ್ಸೂಚಿ ಭಾಷಣ ಮಾಡುತ್ತಾ ಧನಾತ್ಮಕ ಚಿಂತನೆಯನ್ನು ಬೆಳೆಸುವುದರ ಮೂಲಕ ಹಾಗೂ ಪುಸ್ತಕಗಳನ್ನು ಓದುವ ಮೂಲಕ ಯುವಕರು ಬೆಳೆಯಬೇಕು, ಆ ಮೂಲಕ ಸಮಾಜದಲ್ಲಿ ಒಂದು ಸ್ಥರ ನಿರ್ಮಾಣವಾಗಬೇಕು ಎಂದು ಕರೆಯಿತ್ತರು.

ಶಾಸಕ ಕೆ.ರಘುಪತಿ ಭಟ್ ಮಾತನಾಡುತ್ತಾ ಎಲ್ಲಾ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರು ಇದ್ದಾರೆ. ಇವರನ್ನು ಅಭಿವೃದ್ಧಿ ಪಡಿಸಲು ವಿದ್ಯಾನಿಧಿಯನ್ನು ಪ್ರಾರಂಭಿಸಬೇಕು. ಜ್ಯಾತೀಯ ಸಂಘಟನೆ ಅತೀ ಅಗತ್ಯವಾಗಿ ಬೇಕೇ ಬೇಕು ಹಾಗೂ ಯುವ ಪೀಳಿಗೆಗೆ ಸಂಸ್ಕಾರ, ಸಂಸ್ಕೃತಿಯನ್ನು ನೀಡುವಂತಾಗಬೇಕು ಎಂದು ಹೇಳಿದರು. ನಗರಸಭಾ ಸದಸ್ಯ ಮೋಹನ್ ಉಪಾಧ್ಯಾಯ ಉಪಸ್ಥಿತರಿದ್ದು ಸಮಾವೇಶಕ್ಕೆ ಶುಭ ಕೋರಿದರು.

ಸಮಾವೇಶದ ಗೌರವ ಸಂಚಾಲಕರಾದ ಶ್ರೀ ಸಿ.ಎಸ್.ರಾವ್‌ರವರ ಪ್ರಾಸ್ತಾವಿಕ ಮಾತುಗಳು ಪ್ರತಿಯೊಬ್ಬ ಸ್ಥಾನಿಕ ಬ್ರಾಹ್ಮಣರ ಮನಮುಟ್ಟುವಂತಿತ್ತು. ಉಭಯ ಜಿಲ್ಲೆಗಳಲ್ಲಿ ಮೂವತ್ತು ಸಾವಿರದಿಂದ ನಲವತ್ತು ಸಾವಿರ ಜನರಿರುವ ಸಣ್ಣ ಸಮುದಾಯ ಸ್ಥಾನಿಕ ಬ್ರಾಹ್ಮಣರದ್ದು. 15ನೇ ಶತಮಾನದ ತನಕ ದೇವಸ್ಥಾನಗಳಲ್ಲಿ ಅರ್ಚಕವಾಗಿ, ಮುಖ್ಯಸ್ಥರಾಗಿ ಇದ್ದುಕೊಂಡು ಮುಂಚೂಣಿಯಲ್ಲಿ ಮಿಂಚಿದ ನಮ್ಮ ಈ ಸಮುದಾಯ, ಪ್ರಸ್ತುತ ವಿವಿಧ ಕಡೆಗಳಲ್ಲಿ ಬೆರಳೆಣಿಕೆಯಷ್ಟು ದೇವಸ್ಥಾನಗಳು ಮಾತ್ರ ನಮ್ಮ ಕೈಯಲ್ಲಿವೆ ಎಂದರು. ಸ್ಥಾನಿಕ ಬ್ರಾಹ್ಮಣರದಲ್ಲಿ ವೈದಿಕತನದ ಕೊರತೆ, ಹುಡುಗಿಯರ ಕೊರತೆ ಕೂಡ ಇದೆ. ನಮ್ಮ ಸಮಾಜದಲ್ಲಿ ಸಾಕಷ್ಟು ಮಂದಿ ಶಿಕ್ಷಕರು, ಇಂಜಿನಿಯರ್‌ಗಳು, ವೈದ್ಯರು ಉತ್ತಮ ಸೇವೆಯನ್ನು ದೇಶ ವಿದೇಶಗಳಲ್ಲಿ ಸಲ್ಲಿಸುತ್ತಿದ್ದಾರೆ. ಹೆಚ್ಚಿನ ವಿದ್ಯಾರ್ಜನೆಯನ್ನು ಮಾಡಿ ಐಎಎಸ್ ಅಧಿಕಾರಿಗಳಾಗಿ ಸೇವೆಯನ್ನು ಮಾಡಿದವರಿದ್ದಾರೆ ಎಂದು ತಿಳಿಸಿದರು.

ಸಮಾವೇಶದ ಗೌರವ ಅಧ್ಯಕ್ಷರಾದ ಎಂ.ಆರ್. ವಾಸುದೇವ್ ರಾವ್‌ರವರು ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಾ ನಮ್ಮ ಸಮಾಜದಲ್ಲಿ ಅನೇಕ ಮುತ್ತು ರತ್ನಗಳಿವೆ. ಅವುಗಳನ್ನು ಪೋಣಿಸುವ ಕೆಲಸ ಈ ಸಮಾವೇಶದಿಂದ ಆಗಬೇಕು. ಅದಕ್ಕಾಗಿ ಈ ಸಮಾವೇಶವು ಒಂದು ದಾರಿದೀಪವಾಗಲಿ ಎಂದು ಹಾರೈಸಿದರು. ಸಮಾವೇಶ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಉಮೇಶ್ ಶ್ಯಾನುಭಾಗ್, ಕಿರಿಮಂಜೇಶ್ವರ ಅತಿಥಿಗಳನ್ನು ಹಾಗೂ ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು. ದೇವಾನಂದ ಭಟ್‌ರವರ ಧನ್ಯವಾದದೊಂದಿಗೆ ಉದ್ಘಾಟನಾ ಸಮಾರಂಭ ಮುಕ್ತಾಯವಾಯಿತು. ನಾಗರಾಜ ರಾವ್ ವರ್ಕಾಡಿ ಕಾರ್ಯಕ್ರಮ ನಿರ್ವಹಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಫುಲ್ಲಚಂದ್ರ ರಾವ್ ಉಪಸ್ಥಿತರಿದ್ದರು.




## ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಸ್ಥಾನಮಾನ: ಪೇಜಾವರ ಶ್ರೀ

ದಶಕಗಳ ಕಾಲದಿಂದ ಹೋರಾಟ ಮಾಡಿಕೊಂಡು ಬಂದಂತೆ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಇಂದು ಸ್ಥಾನಮಾನದ ಪ್ರತಿಫಲ ದೊರಕಿರುವುದು ನಮಗೆ ಅತೀವ ಸಂತಸ ತಂದಿದೆ ಎಂದು ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಹೇಳಿದ್ದಾರೆ.

ರವಿವಾರ ಕುಂಜಿಬೆಟ್ಟು ಶಾರದಾ ಮಂಟಪದಲ್ಲಿ ನಡೆದ 2 ದಿನಗಳ ಅ.ಭಾ. ಸ್ಥಾನಿಕ ಬ್ರಾಹ್ಮಣ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು ಬ್ರಾಹ್ಮಣರ ವಿವಿಧ ಪಂಥಗಳು ಗರ್ಭಗುಡಿಯ ಹೊರಗಿನ ಪಥಗಳಂತೆ. ಒಂದರೊಳಗೊಂದು ಇರುವ ಪಾತ್ರೆಗಳಂತೆ ಒಬ್ಬರಿಗೊಬ್ಬರು ಪೂರಕವಾಗಿ ಸಮಗ್ರ ಹಿಂದೂ ಸಮಾಜದ ಅಭಿವೃದ್ಧಿಗೆ ಕಾರಣವಾಗಬೇಕು ಎಂದು ನುಡಿದರು.

ಸ್ಥಾನಿಕ ಬ್ರಾಹ್ಮಣ ಸಮಾಜ ಹಿಂದು ಸಮಾಜದಲ್ಲಿ ಬಲಿಷ್ಠ ಪಂಗಡವಾಗಿ ಬೆಳೆದಿದೆ. ಸಮಾಜದಲ್ಲಿ ಶ್ರೇಷ್ಠ-ಕನಿಷ್ಠ ಎಂಬ ಪ್ರಶ್ನೆ ಇಲ್ಲ. ಒಂದೇ ಎಂಬ ಭಾವ ಬೆಳೆಯಬೇಕು. ನಾವೆಲ್ಲ ಒಂದೇ ಪರಂಪರೆಯಿಂದ ಬೆಳೆದು ಬಂದವರೆಂಬುದನ್ನು ಮರೆಯಬಾರದು ಎಂದು ಶ್ರೀಪಾದರು ಹೇಳಿದರು.

ಶ್ರೀಗಳ ಆಶೀರ್ವಚನದ ನಂತರ ಸಮಾವೇಶ ಸಮಿತಿಯ ವತಿಯಿಂದ ಶ್ರೀಗಳಿಗೆ ಹಾರ, ಶಾಲು, ಸ್ಮರಣಿಕೆ, ಫಲ ವಸ್ತುಗಳನ್ನು ನೀಡಿ ಸ್ಥಾನಿಕ ಬ್ರಾಹ್ಮಣ ಸಮಾಜದ ಗೌರವವನ್ನು ಅರ್ಪಿಸಲಾಯಿತು.

## ಕೃತಜ್ಞತಾರ್ಪಣೆ

ದಿನಾಂಕ 12-05-2012 ಮತ್ತು 13-05-2012ರಂದು ಉಡುಪಿ ಕುಂಜಿಬೆಟ್ಟಿನ ಶಾರದಾನಗರದಲ್ಲಿರುವ ಶ್ರೀ ಶಾರದಾ ಮಂಟಪದಲ್ಲಿ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012 ಅತ್ಯಂತ ಯಶಸ್ವಿಯಾಗಿ ನಡೆದ ಬಗ್ಗೆ ಸ್ಥಾನಿಕ ಬ್ರಾಹ್ಮಣ ಸಮಾಜವೇ ಹೆಮ್ಮೆ ಪಡುವಂತಾಗಿದೆ.

ಈ ಸಮಾವೇಶದ ಉದ್ಘಾಟನೆಯನ್ನು ಮಾಡಿ ಶುಭಹಾರೈಕೆ ಮಾಡಿದ ಪೂಜ್ಯ ಡಾ ಡಿ. ವೀರೇಂದ್ರ ಹೆಗ್ಗಡೆಯವರಿಗೆ, ನಮ್ಮ ಮನವಿಯಂತೆ ಸಮಾವೇಶಕ್ಕೆ ಆಗಮಿಸಿ ಆಶೀರ್ವಚನ ನೀಡಿದ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ, ಅಭ್ಯಾಗತರಾಗಿ ಆಗಮಿಸಿ ಶುಭನುಡಿಗಳನ್ನು ಹೇಳಿರುವ ಉಡುಪಿಯ ಶಾಸಕ ಶ್ರೀ ರಘುಪತಿ ಭಟ್ ಇವರಿಗೆ, ಸಮಾರೋಪ ಸಮಾರಂಭದಲ್ಲಿ ಆಗಮಿಸಿ ಹಿತನುಡಿಗಳನ್ನು ನುಡಿದಿರುವ ಕರ್ಣಾಟಕ ಬ್ಯಾಂಕ್‌ನ ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರಾದ ಶ್ರೀ ಜಯರಾಮ್ ಭಟ್ ಇವರಿಗೆ, ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭನುಡಿಗಳನ್ನು ನುಡಿದ ನಗರಸಭಾ ಸದಸ್ಯರಾದ ಶ್ರೀ ಮೋಹನ ಉಪಾಧ್ಯ ಇವರಿಗೆ, ನಮ್ಮ ಸಮಾಜದ ಗಣ್ಯ ಅತಿಥಿಗಳಾದ ಶ್ರೀ ಎ. ಈಶ್ವರಯ್ಯ, ಶ್ರೀ ಮನೋಹರ ಪ್ರಸಾದ್, ಶ್ರೀ ರಾಮಮೋಹನ ರಾವ್ ಬೆಳ್ಳೆ, ಶ್ರೀ ಪಂಜ ಪ್ರದೀಪ್ ಕುಮಾರ್, ಶ್ರೀ ಕೆ. ಪ್ರಭಾಕರ ರಾವ್ ಅಲ್ಲದೆ ಪ್ರತಿಷ್ಠಿತ 4 ವಿಚಾರ ಸಂಕಿರಣಗಳಲ್ಲಿ ಗೋಷ್ಠಿಪತಿಗಳಾಗಿ ಆಗಮಿಸಿದ ಹಿರಿಯರಿಗೆ, ವಿಷಯ ಮಂಡನೆ ಮಾಡಿದ ಸಮಾಜದ ಚಿಂತಕರಿಗೆ ಹೃತ್ಪೂರ್ವಕವಾದ ಧನ್ಯವಾದ ಅರ್ಪಿಸುತ್ತೇವೆ.

ಹಾಗೆಯೇ, ಸಮಾವೇಶ ನಡೆಸುವ ಬಗ್ಗೆ ಪ್ರಸ್ತಾವನೆ ಮಾಡಿದ ದಿನದಿಂದಲೂ ಸಮಾವೇಶ ನಡೆದ ದಿನದ ವರೆಗೆ ಸರ್ವ ರೀತಿಯ ಸಹಕಾರ ನೀಡಿದ ನಮ್ಮ ನಾಡಿನ ಹಾಗೂ ನಾಡಿನ ಹೊರಗಿರುವ ನಮ್ಮ ಸಮಾಜದ ವಿವಿಧ ಸಂಘಟನೆಗಳ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವ ಸದಸ್ಯರಿಗೆ ಪರಊರಿನಿಂದ ಮತ್ತು ಊರ ಆಸುಪಾಸಿನಿಂದ ಸಮಾವೇಶಕ್ಕೆ ಆಗಮಿಸಿದ ಸ್ಥಾನಿಕ ಬ್ರಾಹ್ಮಣ ಸಮಾಜದ ಎಲ್ಲ ಬಂಧುಗಳಿಗೆ ಸ್ವಯಂಸೇವಕರಾಗಿ ದುಡಿದು ಸಮಾವೇಶದ ಯಶಸ್ಸಿಗೆ ಕಾರಣರಾದ ಎಲ್ಲ ಬಂಧುಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಸಮಾವೇಶವನ್ನು ಅವಿಸ್ಮರಣೀಯವಾಗಿರಿಸಿದ ಎಲ್ಲ ಕಲಾವಿದ ಬಂಧುಗಳಿಗೆ, ಸಮಾವೇಶದಲ್ಲಿ ರುಚಿ-ಶುಚಿಯಾದ ಅಡುಗೆ ಹಾಗೂ ಖಾದ್ಯಗಳನ್ನು ತಯಾರಿಸಿಕೊಟ್ಟ ಶ್ರೀ ಮುಂಡ್ಕೂರು ಯೋಗೀಶ್ ರಾವ್ ಮತ್ತು ಬಳಗದವರಿಗೆ, ಚಪ್ಪರ ಹಾಗೂ ವಠಾರದ ಶುಚಿತ್ವವನ್ನು ವ್ಯವಸ್ಥೆಗೊಳಿಸಿದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಶ್ರೀ ಅಜಿತ್ ರಾವ್ ತಂಡಕ್ಕೆ, ಸಮಾವೇಶದ ಪ್ರಚಾರ ಕಾರ್ಯವನ್ನು ವ್ಯವಸ್ಥಿತಗೊಳಿಸಿರುವ ನಮ್ಮ ಸಮಾಜದ ವಿವಿಧ ಪತ್ರಿಕೆಗಳಿಗೆ, ವಿವಿಧ ಸಮಿತಿಗಳ ಪದಾಧಿಕಾರಿಗಳಿಗೆ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೆ ಸಮಾವೇಶ ಸಮಿತಿಯು ಅನಂತ ಧನ್ಯವಾದ ಅರ್ಪಿಸುತ್ತಿದೆ.

**ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ**

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Graphic Tech, "Rajataadri", Manipal, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org